C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 97/2021

ದಿನಾಂಕಃ 31.07.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ನಾನು ಕಿಸಾನ್ ಪೈಂಟ್ ಅಂಗಡಿ ಬಳಿ ಹೋಗಿದ್ದಾಗ ಸಮಯ ಬೆಳಿಗ್ಗೆ 11.30 ಗಂಟೀ ಆಗಿತ್ತು ಹಾಗೂ ಮಧ್ಯಾಹ್ನ 3.00 ಗಂಟೆಯವರೆಗೆ ಅಲ್ಲಿಯೇ ಇದ್ದೆನು. ಅಂಗಡಿ ಹತ್ತಿರ ನಾನು, ನನ್ನ ಅಣ್ಣ ಚಾಸಾ 4, ಅಂಗಡಿಯ ಮಾಲಿಕರು, ಪೊಲೀಸ್ ಇನ್ಸ್ ಪೆಕ್ಟರ್ ಇದ್ದೆವು.

(ತೆರೆದ ನ್ಯಾಯಾಲಯದಲ್ಲಿ ಮು ಮಾ 9 ಡಿವಿಡಿಯನ್ನು ನ್ಯಾಯಾಲಯದ ಸಿಸ್ಟಮ್ ನಲ್ಲಿ ಸಾಕ್ಷಿಯು ಸಮ್ಮುಖದಲ್ಲಿ display ಮಾಡಲಾಯಿತು).

ಸಾಕ್ಷಿಯು ಸದರಿ ಮು ಮಾ 9 ಡಿವಿಡಿ display ಆಗಿರುವುದನ್ನು ವೀಕ್ಷಿಸಿರುತ್ತಾರೆ, 1 ನೇ ದೃಶ್ಯಾವಳಿಯನ್ನು ವೀಕ್ಷಿಸಿ ಸದರಿ ಡಿವಿಡಿ ದೃಶ್ಯಾವಳಿಯಲ್ಲಿ, ನಾನು , ನನ್ನ ಅಣ್ಣ ಚಾಸಾ, ಚಾಸಾ 5 ಮತುತ ಇಬ್ಬರು ಅಂಗಡಿ ಮಾಲಿಕರು ಇರುವುದು ಕಾಣಿಸುತ್ತಿದೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು, ಸದರಿ ಅಂಡಿಯ ಒಳಗೆ ಇರುವ ಕಂಪ್ಯೂಟರ್ ನಲ್ಲಿ, ಸಿಸಿ ಟಿವಿಯ ದೃಶ್ಯಾವಳಿಯಲ್ಲಿ ಕಾಣಿಸುತ್ತಿದೆ ಎಂದು ಹೇಳುತ್ತಾರೆ ಹಾಗೂ ಸದರಿ ದೃಶ್ಯಾವಳಿಯಲ್ಲಿ, ಒಬ್ಬ ವ್ಯಕ್ತಿ ಮಲಗಿರುವುದು ಕಾಣಿಸುತ್ತಿದೆ ಎಂದು ಹೇಳುತ್ತಾರೆ.

ಸದರಿ ಮು ಮಾ 9 ಡಿವಿಡಿಯಲ್ಲಿ ಇರುವ ಎರಡನೆಯ ದೃಶ್ಯಾವಳಿಯನ್ನು ಸಾಕ್ಷಿಯು ನೋಡಿ, ಕಿಸಾನ್ ಪೈಂಟ್ ಹಾರ್ಡ್ ವೇರ್ ಎಂಬ ನಾಮಫಲಕ ಕಾಣಿಸುತ್ತಿದೆ ಹಾಗೂ ಅಂಗಡಿಯ ಒಳಗೆ ನಾನು, ನನ್ನ ಅಣ್ಣ ಚಾಸಾ 4, ಚಾಸಾ 5, ಇಬ್ಬರು ಅಂಗಡಿ ಮಾಲಿಕರು ಮತ್ತು ಒಬ್ಬರು ಪೊಲೀಸರು ಕಾಣಿಸುತ್ತಿದ್ದಾರೆ ಎಂದು ಹೇಳುತ್ತಾರೆ.

ಸಾಕ್ಷಿಯು ಮು ಮಾ 9 ಡಿವಿಡಿಯಲ್ಲಿ ಇರುವ 3 ನೇ ಯ ದೃಶ್ಯಾವಳಿವನ್ನು ವೀಕ್ಷಿಸಿ , ಸದರಿ ದೃಶ್ಯಾವಳಿಯಲ್ಲಿ ನಾನು, ನನ್ನ ಅಣ್ಣ ಚಾಸಾ 4, ಚಾಸಾ 5 ಮತ್ತು ಇಬ್ಬರು ಅಂಗಡಿ ಮಾಲಿಕರು ಇದ್ದೇವೆ ಎಂದು ಹೇಳುತ್ತಾರೆ. ಅಂಗಡಿಯ ಒಳಗೆ ಕಾಣಿಸುತ್ತಿರುವ ಕಂಪ್ಯೂಟರ್ ಸಿಸ್ಟಮ್ ನ ದೃಶ್ಯಾವಳಿಯನ್ನು ನೋಡಿ, ಸಾಕ್ಷಿಯು , ಒಬ್ಬ ವ್ಯಕ್ತಿ ಮಲಗಿರುವುದು ಕಾಣಿಸುತ್ತಿದೆ ಮತ್ತು ಇನ್ನೊಬ್ಬ ವ್ಯಕ್ತಿ ಬಿಳಿ ಚೀಲವನ್ನು ಹಿಡಿದುಕೊಡು ಬರುತ್ತಿರುವುವು ಕಾಣಿಸುತ್ತಿದೆ ಎಂದು ಹೇಳುತ್ತಾರೆ.

ಸಾಕ್ಷಿಯು ಮುಮಾ 10 ಡಿವಿಡಿಯನ್ನು ನ್ಯಾಯಾಲಯದಲ್ಲಿ ವೀಕ್ಷಣೆ ಮಾಡಿ, 1 ನೇ ದೃಶ್ಯಾವಳಿಯಲ್ಲಿ, ಒಬ್ಬ ವ್ಯಕ್ತಿ ಮಲಗಿರುವುದು ಕಾಣಿಸುತ್ತಿದೆ, ಅವರ ತಲೆಯ ಮೇಲೆ ರಕ್ತ ಬಂದಿರುವುದು ಕಾಣಿಸುತ್ತಿದೆ, ಪಕ್ಕದಲ್ಲಿ ಕಲ್ಲು ಮತ್ತು ರುಮಾಲು ಇರುವುದು ಕಾಣಿಸುತ್ತಿದೆ.

ಸಾಕ್ಷಿಯು 2 ನೇ ದೃಶ್ಯಾವಳಿಯನ್ನು ವೀಕ್ಷಿಸಿ, ಒಬ್ಬ ವ್ಯಕ್ತಿ ನೀಲಿ ಬಣ್ಣದ ಚಾಪೆಯ ಮೇಲೆ ಮಲಗಿರುವುದು ಕಾಣಿಸುತ್ತಿದೆ, ಇವರ ತಲೆಯ ಹತ್ತಿರ ಕಲ್ಲು, ರುಮಾಲು, ಹಸಿರು ಬಣ್ಣದ ಚೀಲ ಮತ್ತು ರಗ್ಗು ಇರುವುದು ಕಾಣಿಸುತ್ತಿದೆ.

ಸಾಕ್ಷಿಯು ಇತರೆ ದೃಶ್ಯಾವಳಿಗಳನ್ನು ವೀಕ್ಷಣೆ ಮಾಡಿ, ರಕ್ತ ಹರಿದಿರುವುದು, ವ್ಯಕ್ತಿಯ ತಲೆಗೆ ಗಾಯ ಆಗಿರುವುದು, ಅಂಗಡಿಯ ನೀಲಿ ಬಣ್ಣದ ರೋಲಿಂಗ್ ಶೆಟ್ಟರ್ ಹಾಗೂ ಅಂಗಡಿಯ ಮುಂದೆ ಒಬ್ಬ ವ್ಯಕ್ತಿ ಮಲಗಿರುವುದು ಕಾಣಿಸುತ್ತಿದೆ ಎಂದು ಹೇಳುತ್ತಾರೆ.

ಸಾಕ್ಷಿಯು ಮುಂದುವರೆದು ಹೇಳುತ್ತಾರೆ, ಅಂಗಡಿಯಲ್ಲಿರುವ ಕಂಪ್ಯೂಟರ್ ಸಿಸ್ಟಮ್ ನಲ್ಲಿ ನಾನು ಮುಮಾ 9 ರಲ್ಲಿ ಇದ್ದ ದೃಶ್ಯಾವಳಿಗಳನ್ನು ಮಾತ್ರ ನೋಡಿರುತ್ತೇನೆ ಮತ್ತು ಮು ಮಾ 10 ರಲ್ಲಿ ಇದ್ದ ದೃಶ್ಯಾವಳಿಗಳನ್ನು ನಾನು ಅಂಗಡಿಯ ಕಂಪ್ಯೂಟರ್ ಸಿಸ್ಟಮ್ ನಲ್ಲಿ ನೋಡಿರುವುದಿಲ್ಲ ಎಂದು.

ನಾನು ಅಂಗಡಿಯಲ್ಲಿ ನೋಡಿದ ಸಿಸಿ ಟಿ .ವಿ ಫುಟೇಜ್ ನಲ್ಲಿ, ಒಬ್ಬ ವ್ಯಕ್ತಿಯು ಅಂಗಡಿಯ ಮುಂದೆ ಮಲಗಿರುತ್ತಾನೆ, ಅಲ್ಲಿ ಒಬ್ಬ ವ್ಯಕ್ತಿ ಸ್ವ್ಲ ದೂರದಲ್ಲಿ ಕುಳಿತಿರುತ್ತಾನೆ, ಸ್ವಲ್ಪ ಸಮಯವಾದ ಮೇಲೆ ಕೂತಿದ್ದ ವ್ಯಕ್ತಿಯು ಎದ್ದು ಬಂದು ಮಲಗಿರುವ ಮನುಷ್ಯನ ಹತ್ತಿರ ಬಂದು ಕೈಯಲ್ಲಿ ಇರುವ ಚೀಲದಿಂದ ಕಲ್ಲನ್ನು ಎತ್ತಿ ಮಲಗಿರುವ ವ್ಯಕ್ತಿಯ ಮೇಲೆ ಕಲ್ಲನ್ನು ಎಸೆಯುತ್ತಿದ್ದನು. ಮಲಗಿದ್ದ ವ್ಯಕ್ತಿಯ ತಲೆಯ ಭಾಗಕ್ಕೆ ಕಲ್ಲು ಬಿದ್ದಿತ್ತು, ದೃಶ್ಯಾವಳಿಯಲ್ಲಿ, ಚಾಪೆ, ಕಲ್ಲು, ರುಮಾಲು ಮತ್ತು ಚೀಲವನ್ನು ನೋಡಿರುತ್ತೇನೆ.

ನಂತರ ಪೋಲಿಸರು ಸದರಿ ಸಿಸಿ ಟಿವಿಯ ಫುಟೇಜ್ ದೃಶ್ಯಾವಳಿಗಳನ್ನು ಅಂಗಡಿಯ ಕಂಪ್ಯೂಟರ್ ಸಿಸ್ಟಮ್ ನಿಂದ pendrive ಗೆ copy ಮಾಡಿಕೊಂಡರು. ಮಹಜರ್ ಗೆ ನಾನು, ನನ್ನ ಅಣ್ಣ ಚಾಸಾ 4 ಮನೋಜ್ ರವರು ಸಹಿ ಮಾಡಿದೆವು. ಬೇರೆಯವರು ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಈಗ ನಾನು ನೋಡುತ್ತಿರುವ ನಿಪಿ 12 ರಲ್ಲಿ ನನ್ನ ಸಹಿ ಇದ್ದು, ನನ್ನ ಸಹಿಯನ್ನು ನಿಪಿ 23(ಸಿ) ಎಂದು ಗುರುತಿಸಲಾಯಿತು. pendrive ಮತುತ ಡಿವಿಡಿಯನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು.ಮಾ.8 pendrive ನ್ನು ನೋಡಿ ಗುರುತಿಸುತ್ತಾರೆ.

pendrive ಇದ್ದ  ಚೀಲದ ಮೇಲೆ ಅಂಟಿಸಿರುವ  ಚೀಟಿಯಲ್ಲಿ  ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು,  ಅವರ ಸಹಿಯನ್ನು  ಮು ಮಾ  8(ಎ) ಎಂದು ಗುರತಿಸಲಾಯಿತು.

ಸಾಕ್ಷಿಯು  ನ್ಯಾಯಾಲಯದ ಮುಂದೆ  ಇರುವ  ಮುಮಾ 9 ಮತ್ತು  10 ಡಿವಿಡಿಗಳನ್ನು ನೋಡಿ ಗುರುತಿಸುತ್ತಾರೆ.

ಪೊಲೀಸರು  ಮೇಲೆ  ಹೇಳಿದ ಮಹಜರನ್ನು ಮತ್ತು  ದೃಶ್ಯಾವಳಿಗಳನ್ನು ಮತ್ತು  pendrive ನ್ನು ತೆಗೆದುಕೊಂಡಿದ್ದ, ದಿನಾಂಕ, ವರುಷ ಮತ್ತು ತಿಂಗಳನ್ನು ಹೇಳಲು ಆಗುವುದಿಲ್ಲ ಆದರೆ ಇದನ್ನು  2 ವರುಷಗಳ ಹಿಂದೆ ಅಂದರೆ  ಕೋವಿಡ್ ಸಮಯದಲ್ಲಿ ಪೊಲೀಸರು ಮಾಡಿದ್ದರು.

ಈಗ ನನಗೆ ತೋರಿಸಿದ  ಪಂಚಾಯ್ತಿದಾರರಿಗೆ ನೀಡುವ  ಪೊಲೀಸ್ ನೋಟಿಸಿನಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ.14 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ14(ಎ) ಎಂದು ಗುರುತಿಸಲಾಯಿತು.

ದೃಶ್ಯಾವಳಿಯಲ್ಲಿ ನಾನು ನೋಡಿದ  ಅಂಗಡಿಯ  ಮುಂದೆ  ಮಲಗಿದ್ದ ವ್ಯಕ್ತಿ, ಯಾರು, ಏನು ಎಂದು ನನಗೆ ಗೊತ್ತಿಲ್ಲ, ಆತ ಎಲ್ಲಿ ಇರುತ್ತಿದ್ದ ಎಂದು ನನಗೆ ಗೊತ್ತಿಲ್ಲ.  ಮಲಗಿದ್ದ ವ್ಯಕ್ತಿಯ ಬಗ್ಗೆ ಪೊಲೀಸರು ನನ್ನನ್ನು  ವಿಚಾರಣೆ ಮಾಡಿ  ಮಾಹಿತಿಯನ್ನು ತೆಗೆದುಕೊಳ್ಳಲಿಲ್ಲ.  ಅಂಗಡಿಗೆ ಎರಡು ಸಿಸಿ ಕ್ಯಾಮರಾಗಳು ಇದ್ದವು.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು,  ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಮಾನ್ಯ  ಸರ್ಕಾರಿ ಅಭಿಯೋಜಕರಿಂದಃ</u>

ಪಂಚನಾಮೆಯ ಪೂರ್ವದಲ್ಲಿ  ಆ ಜಾಗದಲ್ಲಿ ಯಾರೋ ಒಬ್ಬರು ಮಲಗಿದ್ದರು,  ಯಾರೋ ದುಷ್ಕರ್ಮಿಗಳು ಅವರ ತಲೆಯ ಮೇಲೆ ಕಲ್ಲನ್ನು  ಎತ್ತಿ ಹಾಕಿಸಿ ಕೊಲೆ ಮಾಡಿದ್ದಾರೆ,  ಅದಕ್ಕೆ ಕೇಸು ಆಗಿದೆ ಎಂದು  ಪೊಲೀಸರು ನನಗೆ  ಹೇಳಿದರು ಎಂದರೆ ಸರಿ.  ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಉಮೇಶ್ ಪೊಲೀಸರು ನನಗೆ  ಹೇಳಿದರು ಎಂದು.  ಕೊಲೆಯಾಗಿದ್ದ ವ್ಯಕ್ತಿಯ ಹೆಸರು ಮಾದಪ್ಪ ಎಂದು,  ಅವರು ಗುಜುರಿ  ಹೆಕ್ಕುವುದನ್ನು ಮಾಡುತ್ತಿದ್ದು, ರಾತ್ರಿ ವೇಳೆ  ಬಂದು ಮಲಗುತ್ತಿದ್ದರು ಎಂದು ಪೊಲೀಸರು ನನಗೆ ಹೇಳಿದ್ದರು  ಎಂದರೆ ಸರಿಯಲ್ಲ.  ಅಂಗಡಿಯ ಹತ್ತಿರ 4 ಸಿಸಿ ಕ್ಯಾಮರಾಗಳು ಇತ್ತು ಎಂದರೆ ಸಾಕ್ಷಿಯು ಇರಬಹುದು ಎಂದು  ನುಡಿಯುತ್ತಾರೆ. ಸಾಕ್ಷಿದಾರರು ನಿರಾಕರಿಸಿದ  ಹೇಳಿಕೆಯ ಭಾಗವನ್ನು ನಿಪಿ  15 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತನ ಪರವಾಗಿ ಎಲ್.ಎ.ಡಿ.ಸಿ ವಕೀಲರಿಂದಃ

ಪೊಲೀಸರು ನನಗೆ ನಿಪಿ 14 ನೋಟಿಸನ್ನು ಕೊಟ್ಟಿರಲಿಲ್ಲ ಎಂದರೆ ಸರಿ ಹಾಗೂ ಪೊಲೀಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಮಾತ್ರ ಸಹಿ ಮಾಡಿದ್ದೆನೆ ಎಂದರೆ ಸರಿ. ಪೊಲೀಸರು ಬಾಯಿಂದ ನನ್ನ ಹೇಳಿಕೆಯನ್ನು ಕೇಳಿದರು, ಆದರೆ ಅದನ್ನು ಬರವಣಿಗೆ ಮಾಡಿಕೊಳ್ಳಲಿಲ್ಲ. ನಿಪಿ 12 ದಾಖಲೆಗೆ ಪೊಲೀಸರು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿ ಮತ್ತು ಇದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಜನರು ಮರ್ಡರ್ ಆಗಿದೆ ಎಂದು ಮಾತನಾಡುತ್ತಿದ್ದರು, ಅದನ್ನು ಕೇಳಿಸಿಕೊಂಡು ನಮ್ಮ ಏರಿಯಾದಿಂದ ಹೊರಗಡೆ ಹೋಗುತ್ತಿದ್ದಾಗ ಎಸ್.ಐ. ರವರು ಬಂದು, ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿರುವ ದೃಶ್ಯವನ್ನು ಒಂದು ಸಿಡಿ ಮತ್ತು pendrive ಗೆ copy ಮಾಡಿಕೊಡು ಎಂದು ಕೇಳಿದರು. ಆಗ ನಾನು ಮತ್ತು ನನ್ನ ಅಣ್ಣ ಅವರ ಜೀಪ್ ನಲ್ಲಿ ಘಟನಾ ಸ್ಥಳಕ್ಕೆ ಹೋದೆವು. ನಾನು ಕಂಪ್ಯೂಟರ್ ಸೈನ್ಸ್ ಸ್ಟೂಡೆಂಟ್ ಆಗಿದ್ದಂರಿದ ಈ ದೃಶ್ಯವನ್ನು ಒಂದು ಸಿಡಿ ಮತ್ತು pendrive ಗೆ copy ಮಾಡುವ ಬಗ್ಗೆ ನನಗೆ ತಿಳುವಳಿಕೆ ಇತ್ತು. ನಾನು ಇದೇ ಮೊದಲನೇ ಬಾರಿಗೆ ಸಿಸಿ ಕ್ಯಾಮರಾ ದೃಶ್ಯವನ್ನು ಸಿಡಿ ಮತ್ತು pendrive ಗೆ copy ಮಾಡಿಕೊಟ್ಟಿದ್ದೆನು ಎಂದರೆ ಸರಿ ಹಾಗೂ ಈ ಮೊದಲು ಬೇರೆ ಯಾವುದೇ ಕೇಸುಗಳಲ್ಲಿ ಇದನ್ನು ಮಾಡಿಲ್ಲ ಎಂದರೆ ಸರಿ. ನಾನು ದೃಶ್ಯಾವಳಿಗಳನ್ನು ದೃಶ್ಯವನ್ನು ಸಿಡಿ ಮತ್ತು pendrive ಗೆ copy ಮಾಡಲಿಲ್ಲ ಬರೀ ದೃಶ್ಯಾವಳಿಗಳನ್ನು ಮಾತ್ರ ಅಂಗಡಿ ಯ ಕಂಪ್ಯೂಟರ್ ಸಿಸ್ಟಮ್ ನಲ್ಲಿ ವೀಕ್ಷಿಸಿದೆನು. ನಾನು ಅಂಗಡಿಯಲ್ಲಿ ನೋಡಿದ ದೃಶ್ಯಾವಳಿಗಳು ಮತ್ತು ನ್ಯಾಯಾಲಯದ ಕಂಪ್ಯೂಟರ್ ಸಿಸ್ಟಮ್ ನಲ್ಲಿ ನೋಡಿದ ದೃಶ್ಯಾವಳಿಗಳು ಬೇರೆ ಬೇರೆ ಆಗಿವೆ ಎಂದರೆ ಸರಿಯಲ್ಲ. ದೃಶ್ಯಾವಳಿಗಳನ್ನು ನೋಡಿದ್ದನ್ನು ಬಿಟ್ಟರೇ, ಆ ದೃಶ್ಯಾವಳಿಯಲ್ಲಿ ಇದ್ದ ವ್ಯಕ್ತಿಗಳು ಯಾರು, ಹಾಗೂ ಆ ದೃಶ್ಯಾವಳಿ ಯಾಕೆ ಅಲ್ಲಿ ಬಂದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಸಿಸಿ ಕ್ಯಾಮಾರಾದಲ್ಲಿ ರೆಕಾರ್ಡು ಆಗಿತ್ತು ಎಂದು ಉತ್ತರಿಸುತ್ತಾರೆ. ದೃಶ್ಯಾವಳಿಯಲ್ಲಿ ನಾನು ವ್ಯಕ್ತಿಯು ಮಲಗಿರುವುದನ್ನು ನೋಡಿದೆನು ಮತ್ತು ಆ ವ್ಯಕ್ತಿಯ ಮೇಲೆ ಯಾರೋ ಕಲ್ಲು ಎತ್ತಿ ಹಾಕಿರುವುದನ್ನು ನೋಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಲೆಯಾಗಿದ್ದ ವ್ಯಕ್ತಿಯ ಬಗ್ಗೆ ನನಗೆ ಖುದ್ದಾಗಿ ಗೊತ್ತಿಲ್ಲ ಮತ್ತು ಪೊಲೀಸರು ಹೇಳಿದ ಮೇಲೆ ನಂತರ ಆ ವ್ಯಕ್ತಿಯ ಹೆಸರು ಗೊತ್ತಾಯಿತುಎಂದರೆ ಸರಿ.

(ಬೆಳಗಿನ ಜಾವದ ನ್ಯಾಯಾಲಯದ ಕಲಾಪ ಮುಗಿದಿದ್ದರಿಂದ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

ದಿನಾಂಕಃ 31.07.2023 ರಂದು ಮಧ್ಯಾಹ್ನ ಪ್ರಮಾಣ ವಚನ ಬೋದಿಸಲಾಗಿದೆ

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

ಮುಂದುವರೆದ ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

'' ಆ ವ್ಯಕ್ತಿ ಈ ಕೇಸಿನ ಪಿರ್ಯಾದಿಯವರಾದ ಸಾಧಿಕ್ ಉಲ್ಲಾಖಾನ್ ರವರ ಗುಜುರಿ ಅಂಗಡಿಗೆ ಪ್ಲಾಸ್ಟಿಕ್ ಬಾಟಲ್ ಗಳನ್ನು ಹಾಕಿ ಹಣ ಸಂಪಾದನೆ ಮಾಡುತ್ತಿದ್ದನೆಂದು ಆತನ ಹೆಸರು ಮುತ್ತುರಾಜು ಉಃ ಕಜ್ಜಿ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. '' ಸದರಿ ಹೇಳಿಕೆಯ ಭಾಗವನ್ನು ನಿಪಿ 15 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲು ಏನು ಇರುವುದಿಲ್ಲ.

ಮರು ವಿಚಾರಣೆಃ ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.